## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ ಕೆ ರಾಥೋಡ್ ರವರ ನಿಯಮ-72ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

**ಪ್ರಶ್ನೆ:**

ರಾಜ್ಯದಲ್ಲಿ ಪೊಲೀಸರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜಿಸಿದಾಗ, ಪೊಲೀಸರಿಗೆ ಆಹಾರ ಭತ್ಯೆ ಹಾಗೂ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದೆ. ಈ ಭತ್ಯೆಗಳ ವಿತರಣೆಯಲ್ಲಿ ಕೋಟ್ಯಾಂತರ ರೂ. ಗೋಲ್‌ಮಾಲ್ ನಡೆದಿದೆ. ಈ ಗೋಲ್‌ಮಾಲ್ ಹಿಂದೆ ಪ್ರಯಾಣ ಭತ್ಯೆ ಮತ್ತು ಆಹಾರ ಭತ್ಯೆ ಮಂಜೂರು ಮಾಡಿಸುವ ಜಿಲ್ಲಾ ಎಸ್.ಪಿ ಕಛೇರಿಗಳ ಲಿಪಿಕ ಸಿಬ್ಬಂದಿಗಳ ಕೈಚಳಕವಿರುವ ಆರೋಪವಿದೆ. ಈ ಪ್ರಕರಣದಿಂದ ರಾಜ್ಯದಲ್ಲಿ 2021-22ರಲ್ಲಿ ಕೋವಿಡ್ ಸಂದರ್ಭದಲ್ಲಿ ನಿಯೋಜಿತವಾಗಿದ್ದ ಹಾಗೂ ಇತರ ಬಂದೋಬಸ್ತ್‌ಗೆ ನಿಯೋಜಿತಗೊಂಡಿದ್ದ ಪೊಲೀಸ್ ಇಲಾಖಾ ಸಿಬ್ಬಂದಿಯವರು ಪ್ರಯಾಣ ಮತ್ತು ಆಹಾರ ಭತ್ಯೆಗಳ ಕಟಾವಣೆಯಿಂದ ಆರ್ಥಿಕ ನಷ್ಟ ಉಂಟಾಗಿ ಪೊಲೀಸರ ನೈತಿಕತೆ ಕುಂದುತ್ತಿರುವುದರ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ರಾಜ್ಯದಲ್ಲಿ ಪೊಲೀಸರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಯೋಜಿಸಿದಾಗ. ಪೊಲೀಸರಿಗೆ ಆಹಾರ ಭತ್ಯೆ ನೀಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಒಇ 127 ಪಿಹೆಚ್‌ಎಸ್ 2020. ದಿನಾಂಕ:30.03.2021ರನ್ವಯ ಹಬ್ಬ ಹರಿದಿನಗಳು, ವಿಶೇಷ ಹಾಗೂ ಚುನಾವಣಾ ಸಂದರ್ಭದಲ್ಲಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿ / ಸಿಬ್ಬಂದಿಗಳಿಗೆ ಆಹಾರ ಭತ್ಯೆ ದರವನ್ನು ರೂ.100/- ರಿಂದ ರೂ.200/-ಗಳಿಗೆ ಹೆಚ್ಚಿಸಿ ಮಂಜೂರಾತಿಯನ್ನು ಹಾಗೂ ನಿಯಮಾನುಸಾರ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದ್ದು, ಈ ಭತ್ಯೆಗಳ ವಿತರಣೆಯಲ್ಲಿ ಯಾವುದೇ ಮೊತ್ತದ ಗೋಲ್‌ಮಾಲ್ ನಡೆದಿರುವುದಿಲ್ಲ. ಪ್ರಯಾಣ ಭತ್ಯೆ ಮತ್ತು ಆಹಾರ ಭತ್ಯೆ ಮಂಜೂರು ಮಾಡಿಸುವ ಜಿಲ್ಲಾ ಎಸ್.ಪಿ ಕಛೇರಿಗಳಲ್ಲಿ ಯಾವುದೇ ರೀತಿಯ ಆರೋಪ ಇರುವುದಿಲ್ಲ. ಮುಂದುವರೆದು, ರಾಜ್ಯದಲ್ಲಿ 2021-22ರಲ್ಲಿ ಕೋವಿಡ್ ಸಂದರ್ಭದಲ್ಲಿ ನಿಯೋಜಿತವಾಗಿದ್ದ ಹಾಗೂ ಇತರೆ ಬಂದೋಬಸ್ತ್‌ಗೆ ನಿಯೋಜಿತಗೊಂಡಿದ್ದ ಪೊಲೀಸ್ ಅಧಿಕಾರಿ/ಸಿಬ್ಬಂದಿಯವರುಗಳಿಗೆ ಪ್ರಯಾಣ ಭತ್ಯೆ ಮತ್ತು ಆಹಾರ ಭತ್ಯೆ ವಿತರಣೆಯಲ್ಲಿ ಯಾವುದೇ ಘಟಕದಿಂದ ಅವ್ಯವಹಾರ ಆಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ಆದ್ದರಿಂದ ಪ್ರಯಾಣ ಭತ್ಯೆ ಮತ್ತು ಆಹಾರ ಭತ್ಯೆಗಳ ವಿತರಣೆಯಿಂದ ಯಾವುದೇ ಆರ್ಥಿಕ ನಷ್ಟವಾಗಿರುವುದಿಲ್ಲ ಹಾಗೂ ಪೊಲೀಸರ ನೈತಿಕತೆಗೆ ಯಾವುದೇ ಧಕ್ಕೆ ಉಂಟಾಗಿರುವುದಿಲ್ಲ.

**ಒಇ/204/ಪಿಪಿಎಸ್/2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು